

ನಾನಾ ಪಾಟೇಕರ್ ನಡತೆಯ ವಿರುದ್ಧ ಧಿಕ್ಕಾರ ಕೂಗುತ್ತಿರುವ ಮಹಿಳೆಯರು.

‘ಮಿ ಟೂ’ ಆಂದೋಲನದಲ್ಲಿ ನಟಿ ತನುಶ್ರೀ ದತ್ತಾ ಅವರ ಮೂಲಕ ಆರೋಪಿ ಸ್ಥಾನದಲ್ಲಿ ನಿಂತಿರುವ ನಾನಾ ಪಾಟೇಕರ್



ಮಾಡಿದರೆನ್ನಲಾದ ಅತ್ಯಂತ ಹೀನ ಅತ್ಯಾಚಾರದ ವಿವರಗಳನ್ನು ಸ್ಕ್ರಿಪ್ಟ್ ರೈಟರ್ ವಿನ್ತಾ ನಂದಾ ಎಳೆಎಳೆಯಾಗಿ ಬಿಚ್ಚಿಟ್ಟರು.

ಚಿನ್ಮಯಿ ಶ್ರೀಪಾದ ಎನ್ನುವ ಗಾಯಕಿ ತಮಿಳಿನ ಸಂಗೀತ ನಿರ್ದೇಶಕ ವೈರಮುತ್ತು ಅವರು ಲೈಂಗಿಕ ಕಿರುಕುಳ ಕೊಟ್ಟದ್ದನ್ನೂ, ಅದಕ್ಕೆ ತಾವು ಪ್ರತಿಭಟಿಸಿದ್ದರ ಪರಿಣಾಮ ತಮಗೆ ಸಿನಿಮಾ ರಂಗದಲ್ಲಿ ಅವಕಾಶಗಳು ಕಡಿಮೆ ಆದದ್ದನ್ನು ಬರೆದುಕೊಂಡಿದ್ದರು.

‘ಎ ಐ ಬಿ’ ಎನ್ನುವ ಹೆಸರಿನ ಕಾಮಿಡಿ ಆಧರಿತ ಕಾರ್ಯಕ್ರಮಗಳನ್ನು ಅಂತರ್ಜಾಲದ ಮೂಲಕ ನಡೆಸುತ್ತಿದ್ದ ಕಂಪನಿಯೊಂದು ಸಂಪೂರ್ಣವಾಗಿ ಕಳಚಿಬಿತ್ತು. ಅದರ ಎಲ್ಲಾ ಮುಖ್ಯ ಪಾತ್ರಧಾರಿಗಳು ಹಾಗೂ ನಟರು ಈ ಆಪಾದನೆಗಳ ಅಡಿಯಲ್ಲಿ, ಮದ್ಯದ ಅಮಲಿನಲ್ಲಿ ಅಥವಾ ಅಹಂಕಾರದ ಮದದಲ್ಲಿ ನಡೆಸಿದ ಹಳವಂಡಗಳ ಸ್ಕ್ರೀನ್ ಶಾಟ್‌ಗಳು ಹೊರಬೀಳುತ್ತಿದ್ದಂತೆ ಇದ್ದಕ್ಕಿದ್ದ ಹಾಗೆ ಜ್ಞಾನೋದಯವಾಗುತ್ತಿದೆ. ಕ್ಷಮಾಯಾಚನೆಯ ಮಹಾಪೂರವೇ ಹರಿದುಬರುತ್ತಿದೆ.

## ಪೂರಕವೇ? ಮಾರಕವೇ?

ಮಿ ಟೂ ಎಂಬ ಅಭಿಯಾನ ತನ್ನಿಂತಾನೇ ಆರಂಭವಾಗುತ್ತಿದ್ದಂತೆ ಪ್ರತಿಕ್ರಿಯೆಗಳೂ ನಾನಾ ರೀತಿಯಲ್ಲೇ ವ್ಯಕ್ತವಾಗುತ್ತಿವೆ. ‘ಇದರಿಂದ ಒಳ್ಳೆಯದಾಗುತ್ತದೆ’ ಎನ್ನುವ ಕಾರಣಕ್ಕೆ ಕೆಲವರು ಬಹಿರಂಗವಾಗಿ ತಾವು ಅನುಭವಿಸಿದ ದೌರ್ಜನ್ಯಗಳ ವಿವರ ನೀಡುತ್ತಿದ್ದಾರೆ. ಇನ್ನೂ ಕೆಲವರು ಅವುಗಳನ್ನು ತಮ್ಮ ಪೇಜುಗಳ ಮೇಲೆ ಹಂಚಿಕೊಳ್ಳುತ್ತಿದ್ದಾರೆ. ನೋವಿಗೆ ದನಿ ಸಿಕ್ಕಿತು, ಸಾಂತ್ವನ ಸಿಕ್ಕಿತು... ಆದರೆ, ಅದೆಲ್ಲವೂ ಬಂದದ್ದು ತಮ್ಮ ಹಾಗೇ ನೋವನ್ನನುಭವಿಸಿದ್ದ ಮತ್ತೊಬ್ಬರಿಂದ!

## ಗಂಡಸರಷ್ಟೇ ದೌರ್ಜನ್ಯ ಎಸಗುವರಾ?

ಇದು ಲಿಂಗಭೇದವಿಲ್ಲದ ಸಮಸ್ಯೆ ಎಂದು ಹೇಳಬಹುದಾದರೂ ಸಾಮಾಜಿಕ ಕಟ್ಟು-ಪಾಡುಗಳಿಗೆ ಒಳಪಟ್ಟ ಹೆಂಗಸರು ಬಹಿರಂಗವಾಗಿ ತಮ್ಮ ಲೈಂಗಿಕ ಬಯಕೆಗಳನ್ನು ಸುಲಭಮಾರ್ಗದಲ್ಲಿ ತೀರಿಸಿಕೊಳ್ಳಲಾಗುವುದಿಲ್ಲ ಎನ್ನಬಹುದು. ಆದರೆ ಮೊನ್ನೆ ನಡೆದ, ಇನ್ನೂ ನಡೆಯುತ್ತಿರುವ ಮಿ-ಟೂ ಅಭಿಯಾನದಲ್ಲಿ ಕಮಿಡಿಯನ್ ಅದಿತಿ ಮಿತ್ತಲ್ ತಮ್ಮನ್ನು ಅಶ್ಲೀಲವಾಗಿ ತುಟಿಯ ಮೇಲೆ ಚುಂಬಿಸಿದರೆಂದು ಆರೋಪ ಮಾಡಿದ ಕನೀಜ್ ಸುರ್ಕಾ (ಇಬ್ಬರೂ ಮಹಿಳೆಯರು) ಅವರ ಕ್ಷಮೆಯನ್ನು ಅದಿತಿ ಯಾಚಿಸಿ, ‘ತಾವು ಮಾಡಿದ್ದು ತಪ್ಪು’ ಎಂದು ಒಪ್ಪುಕೊಂಡಿದ್ದಾರೆ.

ಮಹಿಳಾ ಬಾಸು ಲೈಂಗಿಕವಾಗಿ ಸಂಪರ್ಕ ಹೊಂದಲು ಒತ್ತಾಯಿಸಿದ್ದನ್ನು ತಾನು ನಿರಾಕರಿಸಿದ್ದಕ್ಕೆ ನೌಕರಿ ಬಿಡಬೇಕಾದ ಸಂದರ್ಭ ಉಂಟಾಯಿತು ಎಂದು ಐ.ಟಿ. ಕಂಪನಿಯಲ್ಲಿ ಕೆಲಸಮಾಡುತ್ತಿದ್ದ ಅನಾಮಧೇಯ ಯುವಕನೊಬ್ಬ ಟ್ವಿಟ್ಟರ್‌ನಲ್ಲಿ ಬರೆದುಕೊಂಡಿದ್ದ. ಅದಕ್ಕೆ ಬಂದ ಪ್ರತಿಕ್ರಿಯೆಗಳಿಗೆ ಹೆದರಿ ಆ ಟ್ವೀಟ್ ಅನ್ನು ಅಳಿಸಿಹಾಕಲಾಯಿತು.